ಬಡಕುಟುಂಬಗಳನ್ನು ಗುರುತಿಸಿ ಕಾರ್ಡು ವಿತರಿಸುವ ಬಗ್ಗೆ ಇರುವ ಮಾನದಂಡ ಅನುಸರಿಸಿ ನೀಡಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಆನಾಸ 114 ಡಿಆರ್‌ಎ 2004, ದಿನಾಂಕ: 10–1–2005ರಲ್ಲಿ ಮನೆ–ಮನೆ ಪುನರ್‌ಸಮೀಕ್ಷೆ ಕಾರ್ಯ ಜನವರಿ, 2005ರಿಂದ ಪ್ರಾರಂಭವಾಗಿದ್ದು, ಏಪ್ರಿಲ್, 2005ಕ್ಕೆ ಮುಕ್ತಾಯವಾಗುತ್ತದೆ. ಈ ಸಮೀಕ್ಷೆಯಲ್ಲಿ ಕೈಬಿಟ್ಟು ಹೋದ ಅರ್ಹ ಕುಟುಂಬಗಳ ಮತ್ತು ಅನರ್ಹರು ಹೊಂದಿರುವ ಪಡಿತರ ಚೀಟಿಗಳ ಬಗ್ಗೆ ಸಮೀಕ್ಷೆ ನಡೆಸಿ ವಾರ್ಡ್ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲು ಇಲಾಖೆ ಕ್ರಮ ಕೈಗೊಳ್ಳುವುದು.

ಪ.ಚೀ.	ಅಕ್ಕಿ (ಕೆ.ಜಿ)	ಗೋಧಿ (ಕೆ.ಜಿ)	ಸಕ್ಕರೆ (ಕೆ.ಜಿ)	ಸೀ.ಎಣ್ಣೆ (ಲೀ.)
ಎಎವೈ ಪ.ಚೀ.	28	7	3	8
ಹಳದಿ ಪ.ಚೀ.	20	5	3	8

4) – ಇಲ್ಲ –

5) ಈ ಕ್ಷೇತ್ರದಲ್ಲಿ ಪಡಿತರದಾರರಿಗೆ ಸಮರ್ಪಕವಿತರಣೆ ಮಾಡದೇ ಇರುವ ಕೆಲವೊಂದು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು, ಅಂತಹ 5 ಜನ ಮಾರಾಟಗಾರರ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 1992 ರನ್ವಯ ಕ್ರಮ ಜರುಗಿಸಲಾಗಿದೆ.

1456(1710) ಶ್ರೀ. ನಿಂಗಪ್ಪ ಹೆಚ್.(ಕುಣಿಗಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಹಳ್ಳಿಗಳಲ್ಲಿ ಇರುವ ಎಲ್ಲಾ ಸ್ತ್ರೀಶಕ್ತಿ ಸಂಘಗಳಿಗೆ ಸತ್ತುನಿಧಿ ನೀಡುವ ಬಗ್ಗೆ ಸರ್ಕಾರವು ಗಮನ ಹರಿಸುವುದೇ?

2) ಹಾಗಿದ್ದಲ್ಲಿ, ಈ ನಿಧಿಯನ್ನು 4–5 ಸ್ತ್ರೀಶಕ್ತಿ ಸಂಘಗಳ ಪೈಕಿ 1 ಅಥವಾ 2 ಸಂಘಗಳಿಗೆ ಮಾತ್ರ ನೀಡುತ್ತಿದ್ದು ಇದರಿಂದ ಉಳಿದ ಸಂಘಗಳಿಗೆ ತೊಂದರೆಯಾಗುವುದರ ಬಗ್ಗೆ ಸರ್ಕಾರವು ಗಮನ ಹರಿಸಿರುವುದೇ?

3) ಹಾಗಿದ್ದಲ್ಲಿ, ಸುತ್ತು ನಿಧಿ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀಮತಿ. ಭಾಗೀರಥಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

1) ಸ್ತ್ರೀಶಕ್ತಿ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ರಚನೆಯಾಗಿರುವ ಎಲ್ಲಾ ಗುಂಪುಗಳಿಗೂ ಸರ್ಕಾರದಿಂದ ಸುತ್ತುನಿಧಿ ಬಿಡುಗಡೆ ಮಾಡಲಾಗಿದೆ.

2) ರಾಜ್ಯದಲ್ಲಿರುವ 1 ಲಕ್ಷ ಸ್ತ್ರೀಶಕ್ತಿ ಗುಂಪುಗಳಿಗೆ ಸುತ್ತುನಿಧಿ ಬಿಡುಗಡೆ ಮಾಡಿದೆ.

3) ಉದ್ಭವಿಸುವುದಿಲ್ಲ.

1457(1711) ಶ್ರೀ ನಿಂಗಪ್ಪ ಹೆಚ್.(ಕುಣಿಗಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಭೆ ಸಮಾರಂಭ ನಡೆಸಲು ಅನುಕೂಲವಾಗುವಂತೆ ಸ್ತ್ರೀಶಕ್ತಿ ಸಂಘಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಿಕೊಡಲು ಸರ್ಕಾರವು ಗಮನ ಹರಿಸುವುದೇ?

ಆ) ಇದ್ದರೆ ಯಾವಾಗ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.